ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಓ.ಎಸ್. ಸಂಖ್ಯೆಃ 413/2024**

ಪ್ರ.ವ.ಬೋ.ತಾಃ 17-08-2026

ಪಿ.ಡಬ್ಲ್ಯೂ- 2

| | |
|---|---|
| ಸಾಕ್ಷಿಯ ಹೆಸರು | ನಾಗಭೂಷಣ |
| ತಂದೆ/ಗಂಡನ ಹೆಸರು | ಚಿನ್ನನಾಗಪ್ಪ |
| ವಯಸ್ಸು | 60 ವರ್ಷ |
| ವೃತ್ತಿ | ವಕೀಲರು ಮತ್ತು ನೋಟರಿ |
| ವಾಸ | ಮಧುಗಿರಿ ಟೌನ್, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ-ವಾದಿ ಪರ ಶ್ರೀ ಪಿ.ಡಿ.ಟಿ. ವಕೀಲರಿಂದಃ**

ನಾನು 2013 ರಿಂದ ಇಲ್ಲಿಯವರೆಗೆ ನೋಟರಿ ವಕೀಲರಾಗಿ ಮಧುಗಿರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಿಃ 07.02.2022 ರಂದು ಪ್ರತಿವಾದಿ ನಮ್ಮ ಕಚೇರಿಗೆ ಹಾಜರಾಗಿ ತನಗೆ ಸಂಬಂಧಪಟ್ಟ ಮನೆ ಮತ್ತು ನಿವೇಶನಕ್ಕೆ ಸಂಬಂಧಪಟ್ಟ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ನನ್ನ ಸಮಕ್ಷಮ ಆ ಮನೆ ಮತ್ತು ನಿವೇಶನವನ್ನು ರೂ.ಹತ್ತು ಲಕ್ಷಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ಅದರ ಬಾಬ್ತು ರೂ.ಮೂರು ಲಕ್ಷ ಹಣವನ್ನು ಮುಂಗಡವಾಗಿ ಪಡೆದು, ಅದೇ ದಿನ ಕ್ರಯದ ಕರಾರು ಪತ್ರವನ್ನು ಪ್ರತಿವಾದಿ ಹೇಳಿದಂತೆ ನಮ್ಮ ಕಚೇರಿಯ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಬಿಕ್ಲಾಂದಾರರಾಗಿ ಸಹಿ ಮಾಡಿ ಕೊಟ್ಟಿರುತ್ತೇನೆ ಆ ಕ್ರಯದ ಕರಾರು ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.1 ಎಂದು ಈಗಾಗಲೇ

ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.1(ಇ) ಎಂದು ಗುರುತಿಸಲಾಯಿತು. ಆ ಕ್ರಯದ ಕರಾರು ಪತ್ರಕ್ಕೆ ಪ್ರತಿವಾದಿ ಎರಡು ಕಡೆ ಸಹಿ ಮಾಡಿದ್ದು ಸದರಿಯವರ ಸಹಿಗಳನ್ನು ನೋಡಿ ಗುರುತಿಸುತ್ತೇನೆ. ಆ ಸಹಿಗಳನ್ನು ನಿಪಿ.1(ಎ) ಮತ್ತು 1(ಬಿ) ಎಂದು ಈಗಾಗಲೇ ಗುರುತಿಸಲಾಗಿದೆ. ನನ್ನ ಸಮಕ್ಷಮ ಆ ಕ್ರಯದ ಕರಾರು ಪತ್ರಕ್ಕೆ ಜಗದೀಶ್ ಎಂಬುವವರು ಸಾಕ್ಷಿದಾರರಾಗಿ ಮತ್ತು ಪ್ರತಿವಾದಿಯ ಗಂಡ ಬಿ.ವಿ.ಚೌಡಯ್ಯರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ಸಹಿಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ನಿಪಿ.1(ಸಿ) ಮತ್ತು 1(ಡಿ) ಎಂದು ಈಗಾಗಲೇ ಗುರುತಿಸಲಾಗಿದೆ. ಈ ಬಗ್ಗೆ ನಾನು ನೋಟರಿ ಮಾಡಿಕೊಡುವ ರಿಜಿಸ್ಟರ್ ನಲ್ಲಿ ನಮೂದಿಸಿರುತ್ತೇನೆ. ಅದೇ ರೀತಿ ಆ ರಿಜಿಸ್ಟರ್ ಗೆ ವಾದಿ ಮತ್ತು ಪ್ರತಿವಾದಿಯರ ಸಹಿಗಳನ್ನು ಪಡೆದುಕೊಂಡಿರುತ್ತೇನೆ.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

ಈ ಹಂತದಲ್ಲಿ ಪ್ರತಿವಾದಿ ಏಕಪಕ್ಷೀಯರಾಗಿರುವುದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ